# ಲಿಂಗತ್ವ ಅಲ್ಪಸಂಖ್ಯಾತರಿಗೆ ರಾಜಕಾರಣದಲ್ಲಿ ಬೇಕು ಮಾನ್ಯತೆ



ರೂಮಿ ಹರೀಶ್



ಬೆಂಗಳೂರಿನಲ್ಲಿ 2022ರ ನ. 27ರಂದು ನಡೆದ 'ಬೆಂಗಳೂರು ಕ್ವೀರ್ ಹಬ್ಬ'ದಲ್ಲಿ ಕಂಡ ಒಂದು ಬಿಂಬ.
ಫೋಟೊ: ಎಸ್.ಕೆ. ದಿನೇಶ್

'ಮೀಸಲಾತಿ ಕೊಡಲೇಬೇಕು. ಜೊತೆಗೆ ಇತಿಹಾಸದುದ್ದಕ್ಕೂ ನಡೆದಿರುವ ಅನ್ಯಾಯವನ್ನು ಸರಿಪಡಿಸಲು ಯೋಚಿಸಬೇಕು. ಮೇಲ್ಜಾತಿಗೆ ಕಲ್ಪಿಸುತ್ತಿರುವ ಮೀಸಲಾತಿ ಅಗತ್ಯಕ್ಕಿಂತ ಜಾಸ್ತಿಯಾಗಿದೆ. ಅದು ಮತ್ತೊಂದು ರೀತಿಯಲ್ಲಿ ಅನ್ಯಾಯವನ್ನು ಸೃಷ್ಟಿಸುತ್ತಿದೆ. ತಾವು ಯಾವ ರೀತಿ ಬಿಟ್ಟುಕೊಟ್ಟು ಇಲ್ಲದವರಿಗೆ ನೆರವಾಗುತ್ತೇವೆ ಎಂದು ಅಪ್ಪರ್ ಕಾಸ್ಟ್ ಜಾಗೃತವಾಗಿ ಯೋಚಿಸಬೇಕಿದೆ' ಎನ್ನುವುದು ರೂಮಿ ಹರೀಶ್ ಅವರ ಅಂತರಾಳದ ಮಾತು. ಟ್ರಾನ್ಸ್ ಮೆನ್ ಆಗಿ ಗುರ್ತಿಸಿಕೊಂಡಿರುವ ರೂಮಿ ಅವರು, ಸಾಮಾಜಿಕ ಕಾರ್ಯಕರ್ತರೂ ಹೌದು.

'ತುಳಿತಕ್ಕೆ ಒಳಗಾದವರಿಗೆ ಮೀಸಲಾತಿ ಬೇಕೇ ಬೇಕು. ಈ ಬಗ್ಗೆ ಅಂಬೇಡ್ಕರ್ ನಂತರ ಆ ಮಟ್ಟಿನ ಚಿಂತನೆಯನ್ನು ಯಾರೂ ಮಾಡೇ ಇಲ್ಲ. ಶೋಷಕ ಸಮುದಾಯದಿಂದ ಬಂದವರೂ ಮೀಸಲಾತಿಯ ಬಗ್ಗೆ ಯೋಚನೆಯನ್ನೇ ಮಾಡಿಲ್ಲ. ಟ್ರಾನ್ಸ್‌ಜೆಂಡರ್ ಸಮುದಾಯದಲ್ಲಿ ಕೆಲವರಿಗೆ ಹುಟ್ಟಿನ ಜಾತಿಯ ಶ್ರೀಮಂತಿಕೆ ಇದೆ. ಅವರಿಗೆ ಗುಣಮಟ್ಟದ ಶಿಕ್ಷಣಕ್ಕೆ ಸಮಸ್ಯೆಯಾಗಿಲ್ಲ. ಈಗ ಶೋಷಿತ ಸಮುದಾಯದ ಭಾಗವಾಗಿ ಯೋಚಿಸುವುದರಿಂದ ಸಮಾನತೆಯನ್ನು ರೂಪಿಸಲು ತನಗೂ ಜವಾಬ್ದಾರಿಗಳು ಇವೆ' ಎನ್ನುವ ಅಭಿಪ್ರಾಯವನ್ನು ರೂಮಿ ವ್ಯಕ್ತಪಡಿಸುತ್ತಾರೆ.

'ನ್ಯಾಯಕ್ಕಾಗಿ ನಾನು ಸ್ವಯಂ ಸೇವಕನಾಗಿ ಕೆಲಸ ಮಾಡುತ್ತೇನೆಯೇ ಹೊರತು, ಯಾವುದೇ ಜವಾಬ್ದಾರಿಗಳನ್ನು ನಿರ್ವಹಿಸುವ ಸ್ಥಾನಗಳಲ್ಲಿ ಇರಲು ಬಯಸುವುದಿಲ್ಲ. ಸಮುದಾಯದ ಇತರ ಸದಸ್ಯರ ನಿರ್ಣಯಕ್ಕೆ ಬದ್ಧನಾಗಿ ಕೆಲಸ ಮಾಡುತ್ತೇನೆ' ಎನ್ನುತ್ತಾರೆ.

ಜಾತಿಯ ನೆಲೆಗಟ್ಟಿನಿಂದ ರೂಮಿ ಪ್ರತಿಷ್ಠಿತ ಸಮುದಾಯದಿಂದ ಬಂದವರು. ಹಾಗಾಗಿ, 'ಚಾರಿತ್ರಿಕ ಅನ್ಯಾಯವನ್ನು ಉಲ್ಟಾ ಮಾಡಬೇಕಿದೆ. ತಾನೇ ಅನ್ಯಾಯಕ್ಕೆ ತುತ್ತಾದವರ ಅಗತ್ಯಗಳನ್ನು ಅರಿಯುವುದಕ್ಕಿಂತ, ಅವರೇ ತಮ್ಮ ಆದ್ಯತೆಗಳನ್ನು ಪ್ರಕಟಿಸಿದರೆ ಅದಕ್ಕೆ ಎಂತಹ ಸಹಾಯ ಬೇಕಿದ್ದರೂ ಮಾಡಲು ಸಿದ್ಧ' ಎನ್ನುವ ನಿಲುವು ಅವರದು.

'ಶೋಷಿತ ಲಿಂಗತ್ವ ಅಲ್ಪಸಂಖ್ಯಾತರನ್ನು ಲೆಕ್ಕಕ್ಕೆ ತೆಗೆದುಕೊಳ್ಳಲು ಹೋದರೆ, ಅವರು ಯಾರ ಜಪ್ತಿಗೂ ಸಿಲುಕುವುದಿಲ್ಲ. ಏಕೆಂದರೆ ಗೋಚರಿಸುವ ಜನರಿಗಿಂತ ಕಾಣದೆ ಇರುವವರ ಪ್ರಮಾಣ ದೊಡ್ಡದಿದೆ. ಸಾಕಷ್ಟು ಜನ 'ಇಂತಹವರು' ಎಂದು ಹೇಳಿಕೊಳ್ಳಲು ಆಗದೆ ತೊಳಲಾಡುತ್ತಿರುತ್ತಾರೆ. ಜಾತಿಯಂತೆ 'ಲಿಂಗ' ನಿರ್ದಿಷ್ಟವಾಗುವುದಿಲ್ಲ. ಜಾತಿ–ಧರ್ಮ ಕಣ್ಣಿಗೆ ಕಾಣುವಂತೆ ಇವೆ. ಅಂತೆಯೇ ಶ್ರಮಿಕ, ಬಡ ವರ್ಗವನ್ನೂ ನೋಡಬಹುದು. ಆದರೆ, ನಾನು 'ಗಂಡಸು', ನಾನು 'ಹೆಂಗಸು' ಅಂತ ಎಲ್ಲರೂ ಹೇಳಿಕೊಳ್ಳುವ ಪರಿಸ್ಥಿತಿಯಲ್ಲಿ ಇಲ್ಲ. ಏಕೆಂದರೆ ಅವರಿಗೇ ಅದು ಗೊತ್ತಿರುವುದಿಲ್ಲ. ಲಿಂಗ ವ್ಯವಸ್ಥೆ ಹೇರಿಕೆಯೇ ಆಗಿದೆ. ಬೇರೆ ಲಿಂಗಗಳೂ ಇವೆ. ವಿವಿಧ ರೀತಿಯಲ್ಲಿ ತೊಂದರೆಗೆ ತುತ್ತಾಗಿರುವ ಈ ಸಮುದಾಯಕ್ಕೆ ಶೇ. 1ರ ಮೀಸಲಾತಿ ಯಾವುದಕ್ಕೂ ಸಾಲುವುದಿಲ್ಲ' ಎನ್ನುತ್ತಾರೆ.

ರೂಮಿ ಅವರ ಗೆಳೆಯನೊಬ್ಬ ಆದಿವಾಸಿ, ಅಂಗವಿಕಲ ಹಾಗೂ ಟ್ರಾನ್ಸ್ ಮ್ಯಾನ್. 'ಅಂತಹವನನ್ನು ಎಲ್ಲಿ ಗುರುತಿಸುತ್ತೀರಿ. ಅವನಿಗೆ ಬಹುಸ್ತರದಲ್ಲಿ ಅನ್ಯಾಯ ಆಗಿದೆ. ಒಂದರ ಅನುಪಾತ ಇಂತಹ ವೈವಿಧ್ಯ ರೂಪದ ಅನ್ಯಾಯಕ್ಕೆ ಹೇಗೆ ನ್ಯಾಯ ಕೊಡಲು ಸಾಧ್ಯ?' ಎನ್ನುವುದು ಅವರ ಪ್ರಶ್ನೆ.

ತಾನು ದುಡಿದು ತನ್ನ ಸಮುದಾಯಕ್ಕೆ ನೆರವಾಗುವುದು ರೂಮಿ ಇಂಗಿತ. ಮೀಸಲಾತಿ ನೀಡಲು ನಂಬರ್ ಸಿಸ್ಟಮ್ ಅಳತೆಗೋಲು ಇಟ್ಟುಕೊಳ್ಳಬಾರದು. ಬಹುಸ್ಥರದಲ್ಲಿ ಶೋಷಣೆಗೆ ತುತ್ತಾದವರಿಗೆ ಮೊದಲ ಪ್ರಾಶಸ್ತ್ಯವನ್ನು ಯಾವ ರೀತಿ ಕೊಡಬೇಕು ಎಂದು ಅಂಬೇಡ್ಕರ್ ಮಾದರಿಯಲ್ಲೇ ಯೋಚಿಸುವ ಅಗತ್ಯ ಇದೆ. ದಲಿತ ಕ್ರಾಸ್‌ಜೆಂಡರ್ ಇದ್ದರೆ ಯಾವ ರೀತಿ ಸಮಾಜ ಸ್ಪಂದಿಸಬೇಕು. ಸರಳೀಕರಣ ಮಾಡಿ ಶೇ. 1 ಎನ್ನುವುದು ಖಂಡಿತ ಪರಿಹಾರ ಸೂತ್ರ ಅಲ್ಲ ಎನ್ನುವ ಅನಿಸಿಕೆ ಅವರದು.

''ಜಾತಿ, ಮತೀಯ ಸಂಘರ್ಷದಲ್ಲಿ ಅದರ ಭೀಕರತೆ ಒಂದಿದ್ದರೆ, ಟ್ರಾನ್ಸ್ ಮೆನ್ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯದ ಸ್ವರೂಪ ಬೇರೆ. ಟ್ರಾನ್ಸ್ ವುಮೆನ್ ಅವರ ಮೇಲಿನ ಕಿರುಕುಳ ಬೇರೆ ರೀತಿಯದು. 'ಲಿಂಗ'ವನ್ನು ಸ್ವಯಂ ನಿರ್ಧರಿಸುವ ಸಮುದಾಯಕ್ಕೆ ಜಾತಿ, ಧರ್ಮ, ಪ್ರದೇಶದ ಪೊರೆಯೂ ದೊಡ್ಡ ಸಮಸ್ಯೆಯಾಗಿ ಕಾಡುತ್ತದೆ. ಅದನ್ನು ಬಿಡಿಸಿಕೊಂಡು ಹೊರಬಂದರೆ ಈ 'ಲಿಂಗ'ದ್ವೇಷಿಗಳ ಉರಿಯಲ್ಲಿ ಬೇಯಬೇಕು. ಹೀಗಾಗಿ ಮೀಸಲಾತಿಯನ್ನು ಸರಳವಾಗಿ ವಿಂಗಡಿಸದೇ, ಸಮರ್ಪಕ ವರ್ಗೀಕರಿಸಿ ತಳಮೂಲದಿಂದ ಹಂಚಿಕೆಯಾದರೆ ಮಾತ್ರ ಅದರ ಆಶಯವನ್ನು ಈಡೇರಿಸಲು ಸಾಧ್ಯ. ಇದೇ ಪರಿಕಲ್ಪನೆಯಲ್ಲಿ ಬಾಬಾಸಾಹೇಬರು ಮೀಸಲಾತಿಯನ್ನು ಬಯಸಿದ್ದರು. ಪೂನಾ ಒಪ್ಪಂದದ ಪರಿಣಾಮ ಅದು ಭಿನ್ನ ರೂಪವನ್ನು ಪಡೆದಿದೆ.

ವರ್ಗೀಕೃತ ವ್ಯವಸ್ಥೆ ಅಥವಾ ಬ್ರಾಹ್ಮಣ್ಯದ ರೂಪವನ್ನು ತೆಗೆಯದೆ ಮೀಸಲು ನೀಡುವುದು